


# ಜೈನಧರ್ಮ: ಸಿದ್ಧಾಂತ ಮತ್ತು ತತ್ತ್ವ

ಬಿ.ಜೆ. ಜ್ವಾಲಾ ಸುರೇಶ್

**ಕನ್ನಡಭಾಷೆಯ ಉಗಮಕಾಲದಲ್ಲಿ ಜೈನಧರ್ಮವು ಈ ನಾಡಿನಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಕನ್ನಡ ಪರಂಪರೆಯ ಅವಿಭಾಜ್ಯ ಅಂಗವಾದ ಇದರ ತತ್ತ್ವ ಮತ್ತು ನೀತಿಶಾಸ್ತ್ರವನ್ನು ಸರಳವಾಗಿ ನಿರೂಪಿಸಿರುವ ಲೇಖಕಿ, ಮೈಸೂರಿನ ಥೆರೇಸಿಯನ್ ಸಂಸ್ಥೆಯಲ್ಲಿ ಶಿಕ್ಷಕಿಯಾಗಿದ್ದಾರೆ.**

ಪ್ರಪಂಚದ ಯಾವ ಧರ್ಮವೂ ತನ್ನ ಮೂಲತತ್ತ್ವಗಳಲ್ಲಿ ಕೆಟ್ಟದ್ದನ್ನಾಗಲಿ, ಅಹಿತವಾದದ್ದನ್ನಾಗಲಿ ಬೋಧಿಸುವುದಿಲ್ಲ. ಕಾಲ ದೇಶ ಸ್ಥಿತಿಗಳಿಗೆ ಅನುಸಾರವಾಗಿ ನಾವೇ 'ಇದು ಕೆಟ್ಟದ್ದು, ಇದು ಒಳ್ಳೆಯದು", "ಇದು ಸಹಜ, ಇದು ಅಸಹಜ" ಎಂದೆಲ್ಲ ಗುರುತಿಸುತ್ತೇವೆ. ಒಳ್ಳೆಯ ಬದುಕನ್ನು ಬಾಳಬೇಕು ಎಂಬ ಭಾವನೆ ಎಲ್ಲರಲ್ಲೂ ಬೇರೂರಿದರೆ, ಅದೇ ವಿಶ್ವಧರ್ಮ. ದಯೆ, ದಮ, ದಾನ, ತಪಸ್ಸು, ಶೀಲ ಮೊದಲಾದ ಮೌಲ್ಯಗಳನ್ನು ಹೊಂದಿರುವ ಯಾವುದೇ ಧರ್ಮವಾದರೂ ಅದು ವಿಶ್ವಧರ್ಮವೆಂದೂ, ಅದರ ಪಾಲನೆಯಿಂದ ಮುಕ್ತಿಯು ಸಾಧ್ಯವೆಂದೂ ಆದಿಕವಿ ಪಂಪ, ತನ್ನ 'ಮಹಾಪುರಾಣ' ದಲ್ಲಿ ಮಹಾಬಲನೆಂಬ ವ್ಯಕ್ತಿಯ ಮುಖದಿಂದ ಈ ಮಾತುಗಳನ್ನು ಆಡಿಸುತ್ತಾನೆ:

ಭವವಾರಾಶಿನಿಮಗ್ನರಂ ದಯ ದಮಂ ದಾನಂ ತಪಂ ಶೀಲಮೆಂ  
ಬಿವೆ ಮೆಯ್ವಾಗಿರೆ ಸಂದ ಧರ್ಮಮೆ ವಲಂ  
ಪೊತ್ತೆತ್ತುಗುಂ ಮುಕ್ತಿ ಪ  
ರ್ಯವಸಾನಂಬರಮಾನುಷಂಗಿಕ ಫಲಂ  
ಭೂಪೇಂದ್ರ ದೇವೇಂದ್ರ ರಾ  
ಜ್ಯ ವಿಲಾಸಂ ಪೊತಲ್ತು ನಂಬು ಖಚರಕ್ಷ್ಮಾಪಾಲಚೂಡಾಮಣೀ

"ದಯೆ, ದಮ, ತಪ, ಶೀಲರೂಪವಾದ ಧರ್ಮವೇ ಸಂಸಾರಸಮುದ್ರದಲ್ಲಿ ಮುಳುಗಿಹೋದವರನ್ನು ಮೇಲೆತ್ತುತ್ತದೆ. ಮುಕ್ತಿಯೇ ಅಂತಿಮ ಧ್ಯೇಯ. ಭೂಪೇಂದ್ರ, ದೇವೇಂದ್ರ, ರಾಜ್ಯವೈಭವಗಳೆಲ್ಲ ಅಮುಖ್ಯ ಫಲಗಳು, ಬೇರೆಯವಲ್ಲ. ಎಲೈ ವಿದ್ಯಾಧರ ರಾಜಶ್ರೇಷ್ಠ, ಇದನ್ನು ನಂಬು."

ಮೇಲಿನ ಪದ್ಯದಲ್ಲಿ ಎಲ್ಲಿಯೂ 'ಜೈನಧರ್ಮ'ದ ಪ್ರಸ್ತಾಪ ಬರುವುದಿಲ್ಲ. ತನ್ನಂತೆ ಇತರರನ್ನು ಪ್ರೀತಿಸುವುದೇ ಅಹಿಂಸೆಯ ವ್ಯಾಪಕ ಅರ್ಥವಾಗಿದೆ. ಗಾಂಧೀಜಿಯವರ ಪ್ರಕಾರ, 'ಆತ್ಮಪ್ರೇಮ' ದಿಂದ ಹಿಡಿದು 'ವಿಶ್ವಪ್ರೇಮ' ದವರೆಗೆ ವಿಶ್ವದ ಸಮಸ್ತ ಅಸ್ತಿತ್ವ ವಿಕಾಸಗಳು ಅಹಿಂಸೆಯನ್ನೇ ಆಶ್ರಯಿಸಿವೆ. ಈ ಬಗೆಯ ಅಹಿಂಸೆಯನ್ನು ಜೀವನಾದರ್ಶವಾಗಿ ಜೈನಧರ್ಮ ಎತ್ತಿಹಿಡಿಯುತ್ತದೆ.

## ಜೈನಧರ್ಮದ ಮೂಲ ಸಿದ್ಧಾಂತ

**ಸಮ್ಯಗ್ದರ್ಶನ–ಜ್ಞಾನ–ಚಾರಿತ್ರಾಣಿ ಮೋಕ್ಷಮಾರ್ಗಃ** – ಮೊದಲು, ತಾನು ಕೈಕೊಳ್ಳಬೇಕಾದ ಯಾವುದೇ ಕಾರ್ಯದ ಬಗ್ಗೆ ಒಬ್ಬ ವ್ಯಕ್ತಿಗೆ ಸರಿಯಾದ ವಿಶ್ವಾಸ ಇರಬೇಕು. ಈ ಬಗೆಯ ಶ್ರದ್ಧೆ ಉಂಟಾಗುವುದೇ **ಸಮ್ಯಕ್‌ದರ್ಶನ**. ಅದರಿಂದ ಉಂಟಾಗುವ ಅರಿವೇ **ಸಮ್ಯಕ್‌ಜ್ಞಾನ**. ಈ ಎರಡನ್ನೂ ಅರಿತು ನಮ್ಮ ನಡವಳಿಕೆಯನ್ನು ರೂಪಿಸಿಕೊಳ್ಳುವುದೇ **ಸಮ್ಯಕ್‌ಚಾರಿತ್ರ್ಯ**. ಇದೇ ಮೋಕ್ಷಕ್ಕೆ ದಾರಿಯಾಗಬಲ್ಲುದು.

ತತ್ತ್ವ ಪ್ರೀತಿ ಮನಕ್ಕೆ ಪುಟ್ಟಲದು ಸಮ್ಯಗ್ದರ್ಶನಂ ಮತ್ತಮಾ  
ತತ್ತ್ವಾರ್ಥಂಗಳಂ ಒಲ್ದು ಭೇದಿಪುದು ಸಮ್ಯಗ್‌ಜ್ಞಾನಂ ಆ ಬೋಧದಿಂ  
ಸತ್ವಂಗಳ್ ಕಿಡದಂತುಟೋವಿ ನಡೆಯಲ್ ಸಮ್ಯಕ್ಚಾರಿತ್ರ ಸುರತ್ನತ್ರಂ  
ಮೂರಿವು ಮುಕ್ತಿಗೆಂದು ಅರುಪಿದ್ಯೆ ರತ್ನಾಕರಾಧೀಶ್ವರಾ

"ಮನಸ್ಸಿನಲ್ಲಿ ತತ್ತ್ವಪ್ರೀತಿ ಹುಟ್ಟುವುದೇ **ಸಮ್ಯಗ್‌ದರ್ಶನ**; ಆ ತತ್ತ್ವಾರ್ಥಗಳನ್ನು ಅಂತರಂಗದಲ್ಲಿ ಆಸಕ್ತಿಯಿಂದ ಅರಿಯುವುದೇ **ಸಮ್ಯಗ್‌ಜ್ಞಾನ**; ಜೀವಿಗಳು ನಾಶಗೊಳ್ಳದಂತೆ, ಆ ಜ್ಞಾನದಿಂದ ಅವುಗಳನ್ನು ಪ್ರೀತಿಯಿಂದ ನಡೆದುಕೊಳ್ಳುವುದೇ **ಸಮ್ಯಕ್‌ಚಾರಿತ್ರ**. ಇವು ಮುಕ್ತಿಸಾಧಕವಾದ **ರತ್ನತ್ರಯ**ವೆಂದು ನೀನು ತಿಳಿಸಿದೆ, ರತ್ನಾಕರಾಧೀಶ್ವರಾ"

ತಾನು ಮಾಡಿದ್ದನ್ನು ತಾನೇ ಅನುಭವಿಸಬೇಕೆಂಬುದೇ ಜೈನಧರ್ಮದ ವಿಚಾರಸರಣಿ. ಜೀವ ತನ್ನ ಕ್ರಿಯೆಗಳಿಗೆ ಮತ್ತು ಅವುಗಳ ಫಲಾಫಲಗಳಿಗೆ ತಾನೇ ಹೊಣೆ ಎಂದು ಅರಿಯಬೇಕು; 'ದೇವರು' ಎನ್ನುವ ಅನ್ಯಶಕ್ತಿಯ ಮೇಲೆ ಜವಾಬ್ದಾರಿಯನ್ನು

ಹೊರಿಸಬಾರದು. ಪ್ರತಿಯೊಂದು ಆತ್ಮವೂ ಅನಂತಶಕ್ತಿಯ ಪುಂಜವಾಗಿದೆ; ಅನಂತ ಸುಖ ಪಡೆಯುವ ಸಾಮರ್ಥ್ಯವನ್ನು ಅದು ಹೊಂದಿದೆ. ಹೀಗೆ ಸಾರುವ ಜೈನಧರ್ಮವು ಸಹಜ ವಾಗಿಯೇ ವ್ಯಕ್ತಿಗಳ **'ವಿಚಾರಶಕ್ತಿ'** ಮತ್ತು **'ಆಚಾರಶಕ್ತಿ'** ಗಳಿಗೆ ಸಾಕಷ್ಟು ಪುಷ್ಟಿ ನೀಡುತ್ತದೆ. ಅಂದರೆ, ತಾನು ತನ್ನಲ್ಲಿ ವಿಶ್ವಾಸವಿಟ್ಟು, ತನ್ನ ಬಗ್ಗೆ ತಾನೇ ಅರಿತುಕೊಂಡು, ತನ್ನತನದ ನಿಯಮಗಳನ್ನು ಪಾಲಿಸುವುದೇ **ಯಥಾರ್ಥಜೀವನ** ಅಥವಾ **ಧರ್ಮ** ಎನಿಸುತ್ತದೆ.

ಜೈನಧರ್ಮದಲ್ಲಿ ಭಗವದ್ಗೀತೆಯಂತೆ **'ತತ್ತ್ವಾರ್ಥ ಸೂತ್ರ'** ವೆಂಬ ಗ್ರಂಥವೊಂದಿದೆ. ಅದರಲ್ಲಿ, **"ಜೀವಾಜೀವಾಸ್ರವ ಬಂಧ ಸಂವರ ನಿರ್ಜರಾ ಮೋಕ್ಷಾಸ್ತತ್ವಂ"** ಎಂದು ಹೇಳಿದೆ. ಇದರ ಪ್ರಕಾರ **ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ**ಗಳೆಂಬುವು ಸಪ್ತತತ್ತ್ವಗಳು.

### ಜೀವ

ಲೋಕದಲ್ಲಿ ಜೀವ ಮತ್ತು ಅಜೀವವೆಂಬ ಎರಡೇ ವಸ್ತುಗಳಿವೆ. ಅವುಗಳಲ್ಲಿ ಜೀವಕ್ಕೆ ತುಂಬ ಪ್ರಾಧಾನ್ಯತೆಯಿದೆ. ಜೀವನು ಚೈತನ್ಯಶಕ್ತಿಯನ್ನು ಪಡೆದಿರುತ್ತಾನೆ. ಅವನು ಶಕ್ತಿಶಾಲಿಯೂ ಹಾಗೂ ಚೈತನ್ಯಪೂರ್ಣನೂ ಆಗಿರುತ್ತಾನೆ. ಭೂತ, ಭವಿಷ್ಯತ್, ವರ್ತಮಾನಗಳೆಂಬ ಮೂರು ಕಾಲಗಳಲ್ಲಿಯೂ ಯಾವುದಕ್ಕೆ, ಇಂದ್ರಿಯ, ಆಯುಷ್ಯ, ಬಲ (ಮನ, ವಚನ, ಕಾಯ), ಉಚ್ಛ್ವಾಸ-ನಿಃಶ್ವಾಸ ಎಂಬ ನಾಲ್ಕು ಅಂಶಗಳಿವೆಯೋ ಅದನ್ನು ಸಾಮಾನ್ಯಭಾವದಿಂದ ಜೀವವೆಂದು ಕರೆಯಲಾಗುತ್ತದೆ. ಈ ಶರೀರದಲ್ಲಿರುವ ಚೇತನ ಸ್ವಭಾವವೂ ಜ್ಞಾನದರ್ಶನಾದಿಗಳೂ ಜೀವದ ಗುಣಗಳೇ ಆಗಿವೆ.

ಜೀವಿಗಳಲ್ಲಿ ಎರಡು ವಿಭಾಗಗಳನ್ನು ಮಾಡಬಹುದು: ಒಂದು ಸಂಸಾರಿ ಜೀವ, ಇನ್ನೊಂದು ಮುಕ್ತ ಜೀವ. ಜನನ, ಮುಪ್ಪು, ಮರಣಗಳೆಂಬ ತಾಪತ್ರಯಗಳಿಗೆ ಹಾಗೂ ರಾಗದ್ವೇಷಾದಿಗಳಿಗೆ ಸಿಕ್ಕಿ ಪುಣ್ಯಪಾಪಕರ್ಮಗಳನ್ನು ಸಂಪಾದಿಸಿ, ತಮ್ಮ ಕರ್ಮಕ್ಕನುಗುಣವಾಗಿ ಸುಖದುಃಖಗಳನ್ನು ಅನುಭವಿಸುತ್ತಾ, ದೇವ, ಮನುಷ್ಯ, ಪ್ರಾಣಿಗಳು ಮತ್ತು ನರಕವೆಂಬ ಚತುರ್ಗತಿಗಳಲ್ಲಿ ತೊಳಲಾಡುತ್ತಿರುವವರೇ ಸಂಸಾರಿ ಜೀವಿಗಳು. ಜನನ, ಮುಪ್ಪು, ಮರಣ ರೂಪವಾದ ಈ ಸಂಸಾರಕ್ಕೆ ಕಾರಣವಾದ ಪಾಪ, ಪುಣ್ಯಗಳೆಂಬ ಕರ್ಮವನ್ನು, ಸಂಪೂರ್ಣವಾಗಿ ಇಲ್ಲವಾಗಿಸಿ ಚಿರಕಾಲದವರೆಗೂ ಅನಂತಜ್ಞಾನಾದಿ ಗುಣಗಳಿಂದ ಪ್ರಕಾಶಿಸುವವರೇ ಮುಕ್ತಜೀವರು.

### ಅಜೀವ

ಜ್ಞಾನ, ಸುಖ, ದುಃಖಾನುಭವ ಇತ್ಯಾದಿ ಚೈತನ್ಯಗುಣಗಳಿಲ್ಲ ದಿರುವ ವಸ್ತುವಿಗೆ ಅಜೀವ ದ್ರವ್ಯವೆಂದು ಹೆಸರು. ಅಜೀವ ದ್ರವ್ಯದಲ್ಲಿ ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲಗಳೆಂದು ಐದು ಪ್ರಕಾರಗಳು.

**ಪುದ್ಗಲ:** ಅಜೀವ ವಸ್ತುಗಳಲ್ಲಿ, ಸೇರುವ ಮತ್ತು ಬೇರೆಯಾಗುವ ಸ್ವಭಾವವುಳ್ಳ ವಸ್ತುವಿಗೆ "ಪುದ್ಗಲ"ವೆಂದು ಹೆಸರು. ಇದು ವರ್ಣ, ರಸ, ಗಂಧ ಸ್ಪರ್ಶ ಗುಣಗಳಿಂದ ಕೂಡಿದ್ದು ಮೂರ್ತ ದ್ರವ್ಯವಾಗಿದೆ.

**ಧರ್ಮದ್ರವ್ಯ:** ನೀರು ಮೀನಿನ ಸಂಚಾರಕ್ಕೆ ಸಹಾಯಕವಾಗಿರುವಂತೆ ಜೀವ ಮತ್ತು ಪುದ್ಗಲಗಳ ಸಂಚಾರಕ್ಕೆ ಸಹಾಯಕವಾಗಿರುವ ವಸ್ತುವೇ ಧರ್ಮದ್ರವ್ಯ. ಇದು ಲೋಕದ ಎಲ್ಲಾ ಕಡೆಗಳಲ್ಲಿ ವ್ಯಾಪಿಸಿಕೊಂಡಿರುವ ಅಮೂರ್ತವಾದ ಏಕಮೇವ ಅಖಂಡ ದ್ರವ್ಯವಾಗಿದೆ.

**ಅಧರ್ಮ:** ಬಿಸಿಲಿನಿಂದ ಬಳಲಿರುವ ಪ್ರಯಾಣಿಕನಿಗೆ ಮರದ ನೆರಳು ನಿಲ್ಲುವುದಕ್ಕೆ ಸಹಾಯ ಮಾಡುವಂತೆ ಜೀವ ಪುದ್ಗಲಗಳಿಗೆ ನೆಲೆನಿಲ್ಲುವುದಕ್ಕೆ ಸಹಕಾರಿಯಾಗಿರುವ ವಸ್ತುವೇ ಅಧರ್ಮದ್ರವ್ಯವಾಗಿದೆ. ಇದು ಕೂಡ ಧರ್ಮದ್ರವ್ಯದಂತೆ ಇಡೀ ಲೋಕವನ್ನೆಲ್ಲಾ ಒಂದಾಗಿ ವ್ಯಾಪಿಸಿಕೊಂಡಿರುವ ಅಖಂಡವಾದ ಒಂದೇ ಒಂದು ಅಮೂರ್ತ ದ್ರವ್ಯವಾಗಿದೆ.

**ಆಕಾಶದ್ರವ್ಯ:** **ಜೀವ, ಪುದ್ಗಲ, ಧರ್ಮ, ಅಧರ್ಮ, ಕಾಲ** – ಈ ಐದೂ ದ್ರವ್ಯಗಳಿಗೆ ಇರಲು ಅವಕಾಶವನ್ನು ಮಾಡಿಕೊಡುವ ಗುಣವುಳ್ಳ ದ್ರವ್ಯವೇ ಆಕಾಶದ್ರವ್ಯ. ಇದು ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಅನಂತ, ಅಮೂರ್ತ, ಅಖಂಡವಾದ ದ್ರವ್ಯವಾಗಿದೆ. ಎಲ್ಲಿಯವರೆಗೆ ಈ ಐದೂ ದ್ರವ್ಯಗಳಿರುತ್ತವೆಯೋ ಅದಕ್ಕೆ **ಲೋಕಾಕಾಶ** ಎಂದೂ, ಅದರಾಚೆಗಿನ ಆಕಾಶಕ್ಕೆ **ಅಲೋಕಾಕಾಶ**ವೆಂದೂ ಹೆಸರು.

**ಕಾಲದ್ರವ್ಯ:** ಜೀವ, ಅಜೀವ ದ್ರವ್ಯಗಳ ಪರಿವರ್ತನೆಗೆ ಸಹಾಯಕ ವಾಗಿರುವ ದ್ರವ್ಯವೇ ಕಾಲದ್ರವ್ಯ. ಇದು ಅಮೂರ್ತ ಹಾಗೂ ಅನಂತ ಪರಮಾಣುಗಳ ರೂಪದಲ್ಲಿ ಲೋಕಾಕಾಶದಲ್ಲಿ ಇರುತ್ತದೆ. ಹೀಗೆ ಅಜೀವದ್ರವ್ಯದಲ್ಲಿ ಐದು ಪ್ರಕಾರಗಳಿವೆ.

### ಆಸ್ರವ

ಕರ್ಮವು ಭೌತಪ್ರಕೃತಿಯದಾಗಿದೆ. ಅದು ಸೂಕ್ಷ್ಮವಾದ ಅಗೋಚರವಾದ ರೇಣುಗಳಿಂದ ಕೂಡಿದೆ. ಮೈ ಮಾತು ಮತ್ತು ಮನಸ್ಸುಗಳ ಚಟುವಟಿಕೆಗಳ ಫಲವಾಗಿ ಕರ್ಮವು ಆತ್ಮಕ್ಕೆ ಅಂಟಿಕೊಂಡಿರುತ್ತದೆ. ನೆರೆಯ ನೀರು ಹಲವು ಹತ್ತು ಹಳ್ಳಗಳಿಂದ ಕೊಳದೊಳಗೆ ರಭಸದಿಂದ ಹರಿದುಬರುವಂತೆ ಕರ್ಮವು ರಭಸದಿಂದ ಆತ್ಮದೊಳಗೆ ಹರಿಯುತ್ತಿರುತ್ತದೆ.

ಈ ಮನಸ್ಸು, ಮೈ ಮತ್ತು ಮಾತುಗಳ ಸಂಪರ್ಕದಿಂದಾಗುವ ಪರಿಸ್ಪಂದನಕ್ಕೆ 'ಆಸ್ರವ' ಎಂದು ಹೆಸರು. ಆಸ್ರವವೆಂದರೆ ಕರ್ಮದ ಒಳಹರಿವು. ಕ್ರೋಧ, ಮಾನ, ಮಾಯಾ ಮತ್ತು ಲೋಭಗಳೆಂಬ ನಾಲ್ಕು ಕಷಾಯಗಳಿಂದ ಯುಕ್ತವಾದ ಭಾವಗಳ ಸಹಾಯದಿಂದ ಪುದ್ಗಲ ಕರ್ಮಗಳು ಜೀವನ ಕಡೆಗೆ ಬರತೊಡಗುತ್ತವೆ. ಇದನ್ನೇ 'ಆಸ್ರವ' ವೆನ್ನುವುದು. ಕ್ರೋಧಾದಿಗಳಿಂದ ಕೂಡಿದ ಜೀವಿಯು ಕೊಲೆ, ಹುಸಿ, ಕಳವು, ಪರದಾರ (ಪರಸ್ತ್ರೀ) ಗಮನ,

ಅತಿಕಾಂಕ್ಷೆಗಳೆಂಬ ಪಂಚ ಮಹಾಪಾಪಗಳನ್ನು ಮಾಡಿದಾಗ ಅದನ್ನು 'ಪಾಪಾಸ್ರವ' ಎಂದು ಕರೆಯುತ್ತಾರೆ.

ಮನಸ್ಸು, ಮೈ ಮತ್ತು ಮಾತುಗಳ ಕ್ರಿಯೆಗಳು ಶುಭದ ರೂಪದಲ್ಲಿ ಉಪಯೋಗಿಸಲ್ಪಟ್ಟಾಗ **ಶುಭಯೋಗ** ಅವುಗಳು ಅಶುಭವಾಗಿ ಉಪಯೋಗಿಸಲ್ಪಟ್ಟಾಗ **ಅಶುಭಯೋಗ.** ಇವನ್ನೇ 'ಶುಭ' ಮತ್ತು 'ಅಶುಭ' ರೂಪದ ಆಸ್ರವಗಳೆಂದು ಕರೆಯುತ್ತಾರೆ.

### ಬಂಧ

ಕ್ರೋಧ, ಮಾನ, ಮಾಯಾ ಮತ್ತು ಲೋಭಗಳೆಂಬ ಕಷಾಯಗಳಿಂದ ಕೂಡಿದ ಜೀವ ತನ್ನ ಕಾರ್ಯಕ್ಕೆ ತಕ್ಕುದಾದ ಪುದ್ಗಲಗಳನ್ನು (ವರ್ಣ, ರಸ, ಗಂಧ ಸ್ಪರ್ಶ ಮುಂತಾದುವು) ಗ್ರಹಣ ಮಾಡುವುದಕ್ಕೆ **ಬಂಧ** ಎಂದು ಹೆಸರು.

ಆತ್ಮದ ಈ ಕರ್ಮಬಂಧನವು ನಾಲ್ಕು ವಿಧ. ಅವುಗಳು ಯಾವುವೆಂದರೆ, **ಪ್ರಕೃತಿ** ಅಥವಾ ಸ್ವಭಾವ, **ಸ್ಥಿತಿ** ಅಥವಾ ಕಾಲಾವಧಿ, **ಅನುಭಾಗರಸ** ಅಥವಾ ತೀವ್ರತೆ ಮತ್ತು **ಪ್ರಮಾಣ** ಅಥವಾ ಪ್ರದೇಶ. ಕರ್ಮದ ನಿರಂತರ ಪ್ರವಾಹದಿಂದ ಆತ್ಮವು ಬಂಧಿತವಾಗುತ್ತದೆ. ಮದ, ಮೋಹ, ಮಾತ್ಸರ್ಯ ಮೊದಲಾದ ಮಾನಸಿಕಸ್ಥಿತಿಗಳು ಆತ್ಮನನ್ನು ಕರ್ಮಬಂಧನಕ್ಕೆ ಒಳಪಡಿಸುತ್ತವೆ. ಇದನ್ನೇ **ಭಾವಬಂಧನ** ಎನ್ನುತ್ತಾರೆ. ಕರ್ಮದ ರೇಣುಗಳಿಂದ ಆತ್ಮವು ಬಂಧಿತವಾಗುವುದಕ್ಕೆ **ದ್ರವ್ಯಬಂಧನ** ಎಂದು ಹೆಸರು. ಭಾವಬಂಧನವಾದೊಡನೆ, ದ್ರವ್ಯಬಂಧನವಾಗುತ್ತದೆ. ಏಕೆಂದರೆ, ಕರ್ಮದ ರೇಣುಗಳು ಆತ್ಮನನ್ನು ಆವರಿಸಿ ಅಂಟಿಕೊಳ್ಳುತ್ತವೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಬೆಂಕಿಯಿಂದ ಕಾದಿರುವ ಕಬ್ಬಿಣದ ಗುಂಡನ್ನು ನೀರಿನಲ್ಲಿ ಅದ್ದಿದಾಗ, ಅದು ನೀರನ್ನು ಹೀರುವಂತೆ, ಆತ್ಮವು ಕರ್ಮಬಂಧನಕ್ಕೆ ಒಳಗಾಗುತ್ತದೆ.

### ಸಂವರ

ಆತ್ಮಸಾಕ್ಷಾತ್ಕಾರದ ಮೊದಲ ಹೆಜ್ಜೆಯೆಂದರೆ ಕರ್ಮವು ಒಳಕ್ಕೆ ಪ್ರವೇಶಿಸುವ ಮಾರ್ಗಗಳನ್ನು ತಡೆಗಟ್ಟುವುದು. ಹೀಗೆ ಆಸ್ರವವನ್ನು ತಡೆಯುವುದೇ **'ಸಂವರ'** ಎನಿಸಿಕೊಳ್ಳುತ್ತದೆ. ಕರ್ಮಗಳನ್ನು ತಡೆಯಲು ಯಾವ ಭಾವನೆಯು ಕಾರಣವಾಗುವುದೋ ಅದಕ್ಕೆ 'ಭಾವಸಂವರ' ಎಂದು ಹೆಸರು. ಯಾವ ಭಾವನೆಯ ನಿಮಿತ್ತದಿಂದ ಕರ್ಮಗಳು ತಡೆಯಲ್ಪಡುವವೋ ಅದಕ್ಕೆ 'ದ್ರವ್ಯಸಂವರ' ಎಂದು ಹೆಸರು.

**ಗುಪ್ತಿ, ಸಮಿತಿ, ದಶಧರ್ಮ, ಅನುಪ್ರೇಕ್ಷೆ, ಪರೀಷಹಜಯ, ಚಾರಿತ್ರ ಮತ್ತು ತಪಸ್ಸು**ಗಳಿಂದ ಕರ್ಮಾಸ್ರವವನ್ನು ತಡೆಯಬಹುದು. ಅವುಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

**ತ್ರಿಗುಪ್ತಿ :** ಮನ, ವಚನ ಕಾಯಕ್ರಿಯೆಗಳ ನಿಯಮಕ್ಕೆ ತ್ರಿಗುಪ್ತಿ ಎಂದು ಹೆಸರು.

**ಪಂಚಸಮಿತಿ:** ಪ್ರಾಣಿಗಳಿಗೆ ಹಿಂಸೆಯಾಗದಂತೆ ಪ್ರಯತ್ನ ಪೂರ್ವಕವಾಗಿ ಕೆಲವು ಪ್ರವೃತ್ತಿಗಳನ್ನು ಬೆಳೆಸಿಕೊಳ್ಳುವುದಕ್ಕೆ 'ಸಮಿತಿ' ಎಂದು ಹೆಸರು. ಅಂತಹ ಐದು ಸಮಿತಿಗಳಿವೆ.

೧) ಪ್ರಾಣಿಗಳಿಗೆ ಹಿಂಸೆಯಾಗದಂತೆ ಭೂಮಿಯನ್ನು ನೋಡಿಕೊಂಡು ನಡೆಯುವುದು – **'ಈರ್ಯಾ' ಸಮಿತಿ**

೨) ಅನ್ಯಜೀವಿಗಳಿಗೆ ನೋವಾಗದಂತೆ, ವಿಚಾರಬುದ್ಧಿಯಿಂದ, ಹಿತಮಿತವಾಗಿ ಮಾತನಾಡುವುದು– **'ಭಾಷಾ' ಸಮಿತಿ**

೩) ಆಹಾರ ತೆಗೆದುಕೊಳ್ಳುವಾಗ ಶೋಧಿಸಿ ತೆಗೆದುಕೊಳ್ಳುವುದು – **'ಏಷಣಾ' ಸಮಿತಿ**

೪) ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಇಡುವಾಗ ಹಾಗೂ ಪುನಃ ತೆಗೆದುಕೊಳ್ಳುವಾಗ ಹಿಂಸೆಯಾಗದಂತೆ ಎಚ್ಚರ ವಹಿಸುವುದು – **'ಆದಾನ ನಿಕ್ಷೇಪಣಾ' ಸಮಿತಿ**

೫) ಜೀವಜಂತುರಹಿತ ಸ್ಥಳಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡಬೇಕು; ಅವುಗಳಿಗೆ ತೊಂದರೆಯಾಗದಂತೆ ಎಚ್ಚರ ವಹಿಸಬೇಕು. – **'ಉತ್ಸರ್ಗ' ಸಮಿತಿ**

### ಹತ್ತು ಧರ್ಮಗಳು:

**ಉತ್ತಮ ಕ್ಷಮೆ** : ಕ್ರೋಧವನ್ನು ಸಹಿಸಿಕೊಂಡು ತಾಳ್ಮೆಯನ್ನು ಹೊಂದುವುದು; **ಉತ್ತಮ ಮಾರ್ದವ** : ಗರ್ವವನ್ನು ತೊರೆದು ನಮ್ರನಾಗಿರುವುದು; **ಉತ್ತಮ ಆರ್ಜವ**: ಮನ–ವಚನ–ಕಾಯಕಗಳಲ್ಲಿ ವಕ್ರವಿಲ್ಲದಿರುವುದು; **ಉತ್ತಮ ಶೌಚ** :ಲೋಭವನ್ನು ತೊರೆದು ಆತ್ಮಶುದ್ಧಿಯನ್ನು ಸಾಧಿಸುವುದು; **ಉತ್ತಮ ಸತ್ಯ**: ಅಪ್ರಿಯವಾದ ಸತ್ಯವನ್ನು ಹೇಳದೆ, ಪ್ರಿಯವಾದ ಸತ್ಯವನ್ನು ಮಾತ್ರವೇ ಹೇಳುವುದು; **ಉತ್ತಮ ಸಂಯಮ**: ತ್ರಿಕರಣಶುದ್ಧಿಯಿಂದ ಪ್ರಾಣಿಗಳಿಗೆ ಪೀಡೆ ಮಾಡದಿರುವುದು; **ಉತ್ತಮ ತಪ**: ಅನಶನ (ಉಪವಾಸ) ಮೊದಲಾದ ಹನ್ನೆರಡು ತಪಗಳನ್ನು ಆಚರಿಸುವುದು; **ಉತ್ತಮ ಆಕಿಂಚನ್ಯ**: ಶುಭ ಪರಿಣಾಮದಿಂದ ದಾನ ಮಾಡುವುದು– ತ್ಯಾಗ ಮಾಡುವುದು; **ಉತ್ತಮ ಬ್ರಹ್ಮಚರ್ಯ:** ಸ್ತ್ರೀಸಂಗ ತ್ಯಾಗ.

### ದ್ವಾದಶಾನುಪ್ರೇಕ್ಷೆ

ಶರೀರಾದಿ ಸಮಸ್ತ ವಸ್ತುಗಳ ಸ್ವರೂಪವನ್ನು ಮತ್ತೆ ಮತ್ತೆ ವಿಚಾರ ಮಾಡುವುದು ಅನುಪ್ರೇಕ್ಷೆಯಾಗಿದೆ. ಅದು ೧೨ ವಿಧವಾಗಿದೆ:

**ಅನಿತ್ಯ:** ಆತ್ಮನೊಬ್ಬನೇ ನಿತ್ಯ, ಉಳಿದುದೆಲ್ಲವೂ ಅನಿತ್ಯ ಎಂಬ ಭಾವನೆ ; **ಅಶರಣ:** ಮರಣದಿಂದ ಯಾರೂ ತನ್ನನ್ನು ರಕ್ಷಿಸರು, ಧರ್ಮ ಮಾತ್ರವೇ ರಕ್ಷಣೆಯನ್ನು ನೀಡಬಲ್ಲುದು ಎಂದು ಚಿಂತಿಸುವುದು; **ಸಂಸಾರ:** ಸಂಸಾರದಲ್ಲಿ ಹುರುಳಿಲ್ಲವೆಂದು ಅದನ್ನು ತ್ಯಜಿಸಿ, ರತ್ನತ್ರಯಗಳನ್ನು ಹೊಂದಲು ಯತ್ನಿಸುವುದು; **ಏಕತ್ವ** ಜನ್ಮ, ಜರೆ, ಮರಣಗಳ ದುಃಖವನ್ನು ತಾನೊಬ್ಬನೇ ಏಕಾಂಗಿಯಾಗಿ ಅನುಭವಿಸಬೇಕಾಗುತ್ತದೆ, ಯಾವ ಬಂಧುಗಳೂ ಅದರಲ್ಲಿ ಭಾಗಿಯಾಗುವುದಿಲ್ಲ ಎಂದು ತಿಳಿಯುವುದು; **ಅನ್ಯತ್ವ** ಶರೀರದಿಂದ ಆತ್ಮಸ್ವರೂಪಿಯಾದ ತಾನು ಬೇರೆ ಎಂದು

ತಿಳಿಯುವುದು. ಶರೀರಪೀಡೆ ನನ್ನದಲ್ಲ, ತಾನು ಆತ್ಮಸಂಬಂಧಿ ಎನ್ನುವುದು; **ಅಶುಚಿತ್ವ** ಅಶುಚಿಯಾದ (ಮಲಿನವಾದ) ಶರೀರವನ್ನು ಸೊರಗಿಸಿ ಅವಿನಾಶಿಯಾದ ಸುಖವನ್ನು ಹೊಂದಲು ಯತ್ನಿಸುವುದು; **ಆಸ್ರವ:** ಕಾದ ಕಬ್ಬಿಣವು ನೀರನ್ನು ಹೀರುವಂತೆ, ಜೀವಿಯು ಕರ್ಮಫಲವನ್ನು ಹೀರುತ್ತಾನೆ. ಈ ಕರ್ಮಾಣುಗಳು ಬಾಧಿಸುತ್ತವೆ. ಇವು ಆತ್ಮನಲ್ಲಿ ಸೇರದಂತೆ ಎಚ್ಚರಿಕೆ ವಹಿಸುವುದು; **ಸಂವರ:** ಪಾಪಕರ್ಮಗಳು ಒಳಗೆ ಸೇರದಂತೆ ತಡೆಯುವುದು; **ನಿರ್ಜರಾ:** ಜೀವದಲ್ಲಿ ಬಂದು ಸೇರುವ ಕರ್ಮ ಕಲಂಕವನ್ನು ವ್ರತ ಗುಣ ಚಾರಿತ್ರ್ಯಗಳಿಂದ ಕೂಡಿದ 'ಭೇದ-ಜ್ಞಾನ' ವೆಂಬ ಜಲದಿಂದ ತೊಳೆದು, ಸ್ವಚ್ಛ ಮಾಡುವುದು. **ಲೋಕಾನುಪ್ರೇಕ್ಷೆ:** ಷಡ್‌ದ್ರವ್ಯಗಳಿರುವ ಸ್ಥಳವೇ ಲೋಕ. ಅದರಾಚೆ ಇರುವುದು ಅಲೋಕ ಎಂಬ ವಿಷಯವನ್ನು ತಿಳಿಯಲು ಪ್ರಯತ್ನಿಸುವುದು; **ಬೋಧಿದುರ್ಲಭ** ರತ್ನತ್ರಯಗಳ ಸ್ವರೂಪವನ್ನು, ಅವುಗಳು ಅಪರೂಪದ ವಸ್ತುಗಳೆಂದು ತಿಳಿದು, ಅವುಗಳ ಹಿರಿಮೆಯನ್ನು ಚಿಂತಿಸುವುದು; **ಧರ್ಮಾನುಪ್ರೇಕ್ಷೆ:** ಧರ್ಮಗಳ ಆಚರಣೆ ಇಲ್ಲದೆ ತನಗೆ ಮುಕ್ತಿ ಲಭಿಸುವುದಿಲ್ಲವೆಂಬ ಚಿಂತನೆ.

ಮಹಾವೀರ ಪ್ರತಿಮೆ -ಮೆಹರುಲಿ



### ಪರೀಷಹ ಜಯಗಳು

ಮೋಕ್ಷಮಾರ್ಗದಲ್ಲಿ ಕ್ರಮಿಸುವಾಗ ಅನೇಕ ಕಷ್ಟಗಳು ನಮಗೆ ಎದುರಾಗುತ್ತವೆ. ಅವುಗಳನ್ನು ಶಾಂತರೀತಿಯಿಂದ ಸಹಿಸಿಕೊಳ್ಳಬೇಕು. ಈ ಕಷ್ಟಗಳಿಗೆ **ಪರೀಷಹ** ಎನ್ನುತ್ತಾರೆ. ಹಸಿವು, ಬಾಯಾರಿಕೆ, ಚಳಿ, ಬಿಸಿಲು, ಸೊಳ್ಳೆ ನೊಣಗಳ ಕಡಿತ, ಬತ್ತಲೆ – ಮುಂತಾದವುಗಳ ಕಷ್ಟ ಸಹಿಸುವುದು; ಸಿಕ್ಕಲ್ಲಿ ತಂಗುವುದು, ಸ್ತ್ರೀಸಹವಾಸ ಬಿಡುವುದು, ಸಂಚರಿಸುವುದು, ಶ್ಮಶಾನ ಮೊದಲಾದ ದುರ್ಗಮ ಸ್ಥಳಗಳಲ್ಲಿ ಧ್ಯಾನಕ್ಕೆ ಕೂಡುವುದು, ಸಿಕ್ಕಲ್ಲಿ ಮಲಗುವುದು ಇತ್ಯಾದಿ ೨೨ ಪರೀಹಷಗಳಿವೆ. ಅವುಗಳನ್ನು ಗೆದ್ದರೆ, ಸಾಧಕನ ಮನಸ್ಸು ಪಕ್ವವಾಗುತ್ತದೆ.

### ತಪಸ್ಸು

ಕೆಲವು ವಸ್ತುಗಳ ಸಂಸ್ಕರಣೆಯಲ್ಲಿ ಅಗ್ನಿಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಚಿನ್ನವನ್ನು ದಹನಕ್ರಿಯೆಯ ಮೂಲಕ ಪುಟಕ್ಕಿಟ್ಟಾಗಲೆ ಪರಿಶುದ್ಧಗೊಂಡು ಅಪರಂಜಿಯಾಗುತ್ತದೆ. ಅದೇ ರೀತಿ ಹಾಲಿನಲ್ಲಿರುವ ತುಪ್ಪದ ಅಂಶವೂ ಕೂಡ, ಚೆನ್ನಾಗಿ ಕಡೆದನಂತರ ಮೊಸರಾಗಿ, ನಂತರ ಅದನ್ನು ಬೆಂಕಿಯಲ್ಲಿ ಕಾಯಿಸಿದಾಗ ಘಮಘಮಿಸುವ ತುಪ್ಪವಾಗುತ್ತದೆ. ಅದರಂತೆ ದೀರ್ಘಕಾಲದಿಂದ, ಜ್ಞಾನಾವರಣ ಮೊದಲಾದ ಅಷ್ಟಾವರಣಗಳಿಂದ ಬಂಧಿತನಾದ ಆತ್ಮನು ಈ ಕೆಳಗಿನ ತಪೋವಿಧಾನಗಳಿಂದ ಶುದ್ಧನಾಗಿ ಮೋಕ್ಷಕ್ಕೆ ಅರ್ಹನಾಗುತ್ತಾನೆ: **ಅನಶನ** (ಉಪವಾಸ), **ಊನೋದಾರಿ** (ಮಿತಾಹಾರ), **ವೃತ್ತಿಪರಿಸಂಖ್ಯಾನ** (ತಾನಾಗಿಯೇ ದೊರೆತಾಗ ಮಾತ್ರ ಆಹಾರವನ್ನು ಸೇವಿಸುವುದು), **ರಸತ್ಯಾಗ** (ಸಿಹಿ, ಉಪ್ಪು ಇತ್ಯಾದಿಗಳು), **ವಿವಿಕ್ತ ಶಯ್ಯಾಸನ** (ಏಕಾಂತಸ್ಥಲದಲ್ಲಿ ಕುಳಿತುಕೊಳ್ಳುವುದು, ಮಲಗುವುದು), **ಕಾಯಕ್ಲೇಶ** (ಬಿಸಿಲು, ಮಳೆ, ಚಳಿಗೆ ಮೈಯೊಡ್ಡಿ ಮಾಡುವ ತಪಸ್ಸು). ಈ ಆರು ತಪಸ್ಸುಗಳು ಕಣ್ಣಿಗೆ ಗೋಚರವಾಗುತ್ತವೆ. ಆದ್ದರಿಂದ ಅವುಗಳನ್ನು **ಬಾಹ್ಯತಪಸ್ಸು** ಎಂದು ಕರೆಯುತ್ತಾರೆ. ಇನ್ನುಳಿದ ಆರು ತಪಸ್ಸುಗಳನ್ನು **ಆಂತರಿಕ ತಪಸ್ಸು** ಎನ್ನುತ್ತಾರೆ. ಅವು ಯಾವುವೆಂದರೆ, **ಪ್ರಾಯಶ್ಚಿತ್ತ** (ಪ್ರಮಾದಗಳನ್ನು ಗುರುವಿನಲ್ಲಿ ಅರಿಕೆ ಮಾಡಿಕೊಳ್ಳುವುದು), **ವಿನಯ** (ದರ್ಶನ, ಜ್ಞಾನ, ಚಾರಿತ್ರ, ತಪಸ್ಸುಗಳಲ್ಲಿ ನಿರ್ವಂಚನೆ), **ವೈಯಾವೃತ್ಯ** (ಜೈನ ಮುನಿಸಂಘದ ಸೇವೆ), **ಸ್ವಾಧ್ಯಾಯ** (ಆತ್ಮವಿಷಯಕ ಅಧ್ಯಯನ), **ವ್ಯುತ್ಸರ್ಗ** (ಶಾರೀರಿಕ ಕಷಾಯಗಳ ತ್ಯಾಗ) ಮತ್ತು **ಧ್ಯಾನ.** ಧ್ಯಾನದಲ್ಲಿ **ಧರ್ಮಧ್ಯಾನ** ಮತ್ತು **ಶುಕ್ಲಧ್ಯಾನ** ಎಂದು ಎರಡು ವಿಧ. ಮೊದಲನೆಯದು ಸ್ವರ್ಗಾದಿಗಳಿಗೆ ಕಾರಣ. **ಶುದ್ಧಾತ್ಮಧ್ಯಾನ**ವೆಂದೂ ಕರೆಯಲಾಗುವ ಎರಡನೆಯದು ಮೋಕ್ಷಕ್ಕೆ ಕಾರಣ.

### ಚಾರಿತ್ರ

ತಪಸ್ಸಿನ ಮೂಲಸ್ತಂಭ ಸದಾಚಾರ. ಐದು ಬಗೆಯ ಚಾರಿತ್ರಗಳಿವೆ. ಅವೆಂದರೆ, **ಸಾಮಾಜಿಕ, ಛೇದೋಪಸ್ಥಾಪನೆ, ಪರಿಹಾರವಿಶುದ್ಧಿ, ಸೂಕ್ಷ್ಮಸಾಂಪರಾಯ ಮತ್ತು ಯಥಾಖ್ಯಾತ.**

### ನಿರ್ಜರಾ

ಆತ್ಮನಿಗೆ ಬಂಧವಾದ ಕರ್ಮಗಳು ಸ್ವಲ್ಪ ಸ್ವಲ್ಪವಾಗಿ ಬಿಟ್ಟು ಹೋಗುವುದಕ್ಕೆ 'ನಿರ್ಜರಾ' ಎಂದು ಹೆಸರು. ಕರ್ಮಗಳು

ನಿರ್ಜರವಾಗಲು ಯಾವ ಭಾವನೆಯು ಕಾರಣವಾಗುವುದೋ ಅದಕ್ಕೆ "ಭಾವನಿರ್ಜರಾ" ಎಂದು ಹೆಸರು. ಯಾವ ಭಾವನೆಯ ಕಾರಣದಿಂದ ಕರ್ಮಗಳು ನಿರ್ಜರವಾಗುತ್ತದೆಯೋ ಅದಕ್ಕೆ 'ದ್ರವ್ಯನಿರ್ಜರಾ' ಎಂದು ಹೆಸರು. ಕರ್ಮಗಳ ಕಾಲಾವಧಿಯು ಪೂರ್ತಿಯಾದ ಕೂಡಲೇ ಫಲವನ್ನು ಕೊಟ್ಟೋ ಕೊಡದೆಯೋ ಬಿಟ್ಟು ಹೋಗುವುದಕ್ಕೆ 'ಸವಿಪಾಕ ನಿರ್ಜರಾ' ಎಂದು ಹೆಸರು. ಕಾಲಾವಧಿಗೆ ಮುಂಚಿತವಾಗಿಯೇ ಜಪತಪಾದಿಗಳಿಂದ ಪರಿಪಾಕಗೊಂಡು, ಕರ್ಮಗಳು ಫಲವನ್ನು ಕೊಟ್ಟು, ಆತ್ಮಪ್ರದೇಶ ದಿಂದ ಕಳಚಿಹೋಗುವುದಕ್ಕೆ 'ಅವಿಪಾಕ ನಿರ್ಜರಾ' ಎಂದು ಹೆಸರು.

ತ್ರಿಗುಪ್ತಿ, ಪಂಚಸಮಿತಿ, ದಶಧರ್ಮ, ದ್ವಾದಶಾನುಪ್ರೇಕ್ಷೆ ೨೨ ಪರೀಷಹ ಜಯ, ಪಂಚಚಾರಿತ್ರ, ಆರು ವಿಧವಾದ ಬಾಹ್ಯ ತಪಸ್ಸು, ಆರು ವಿಧವಾದ ಅಂತರಂಗ ತಪಸ್ಸುಗಳನ್ನು ನಿಯಮ ದಿಂದ ಪರಿಪಾಲಿಸುವುದರಿಂದ 'ಸಕಾಮ ವಿಪಾಕನಿರ್ಜರ' ದ ಸಿದ್ಧಿಯಾಗುತ್ತದೆ. ಇಷ್ಟ ಇಲ್ಲದಿರುವ ಶಿಕ್ಷೆ, ಕಾರಾಗೃಹವಾಸ ಇತ್ಯಾದಿ ರೀತಿಗಳಲ್ಲಿ ಸಂಭವಿಸುವ ಕಷ್ಟಗಳ ಮೂಲಕವಾಗಿ ಆಗುವ ನಿರ್ಜರೆಗೆ 'ಅಕಾಮ ಅವಿಪಾಕ ನಿರ್ಜರಾ' ಎನ್ನುತ್ತಾರೆ.

## ಮೋಕ್ಷ

ಬಂಧಕಾರಣಗಳ ಅಭಾವದಿಂದ ಮತ್ತು ಕರ್ಮಗಳ ನಿರ್ಜರೆಯಿಂದ, ಸಮಸ್ತ ಕರ್ಮಪ್ರಕೃತಿಗಳು ಜೀವನಿಂದ ಪೂರ್ಣವಾಗಿ ಬಿಡಲ್ಪಡುವುದಕ್ಕೆ 'ಮೋಕ್ಷ' ವೆಂದು ಹೆಸರು. ಅಂದರೆ ಆತ್ಮಪ್ರದೇಶದಿಂದ ಕರ್ಮಗಳು ದೂರವಾದಾಗ, ಅವುಗಳಿಂದ ಆ ಆತ್ಮನು ನಿರ್ಮುಕ್ತನಾಗುತ್ತಾನೆ. ಇದು ಹಿಂದೆ ವಿವರಿಸಿದ 'ಸಂವರ' ಮತ್ತು 'ನಿರ್ಜರೆ' ಗಳಿಂದ ಸಾಧ್ಯವಾಗುತ್ತದೆ. ಸಂಸಾರಕ್ಕೆ ಕಾರಣವಾದ ಪಾಪಪುಣ್ಯಗಳೆಂಬ ಕರ್ಮಬೀಜಗಳನ್ನು ಸಂಪೂರ್ಣವಾಗಿ ನಾಶಮಾಡುವುದರಿಂದ, ಹುರಿದ ಬೀಜ ಬೆಳೆಯದಿರುವಂತೆ, ಸಂಸಾರವಸ್ಥೆಗೆ ಯಾವ ಕಾರಣಕ್ಕೂ, ಎಂದೂ ಜೀವವು ಹಿಂದಿರುಗಲಾರದು.

## ಜೈನತತ್ತ್ವೋಪದೇಶ

೧) ಸುಖವಿಲ್ಲದ್ದು ಜೀವನವಲ್ಲ ; ೨) ಪುಣ್ಯವಿಲ್ಲದೆ ಸುಖವಿಲ್ಲ; ೩) ಧರ್ಮವಿಲ್ಲದೆ ಪುಣ್ಯವಿಲ್ಲ; ೪) ಅಹಿಂಸೆ ಇಲ್ಲದೆ ಧರ್ಮ ವಿಲ್ಲ; ೫) ಆಚಾರವಿಲ್ಲದೆ ಅಹಿಂಸೆ ಇಲ್ಲ; ೬) ವಿಚಾರವಿಲ್ಲದೆ ಆಚಾರವಿಲ್ಲ; ೭) ನಂಬಿಕೆ ಇಲ್ಲದೆ ವಿಚಾರವಿಲ್ಲ; ೮) ದಾನ ತ್ಯಾಗಗಳಿಲ್ಲದೆ ಪೂಜೆಯಿಲ್ಲ; ೯) ನಿಃಸ್ವಾರ್ಥವಿಲ್ಲದೆ ದಾನ ತ್ಯಾಗಗಳಿಲ್ಲ; ೧೦) ಸ್ವಾರ್ಥ ತೊರೆಯದೆ ನಿಸ್ವಾರ್ಥವಿಲ್ಲ; ೧೧) ಲೋಭತೊರೆಯದೆ ಸ್ವಾರ್ಥ ಕಳೆಯುವುದಿಲ್ಲ; ೧೨) ಮೋಹ ಕಳೆಯದೆ ಲೋಭ ಕಳೆಯುವುದಿಲ್ಲ; ೧೩)ರಾಗ–ದ್ವೇಷ ತೊರೆಯದೆ ಮೋಹ ಬಿಡುವುದಿಲ್ಲ; ೧೪) ಮೋಹ ಬಿಡದೆ ಸಮತಾಭಾವವಿಲ್ಲ; ೧೫) ಸಮ್ಯಕ್ತ್ವವಿಲ್ಲದೆ (ಸತ್ಯದಲ್ಲಿ ಶ್ರದ್ಧೆಯು ನೆಲೆನಿಲ್ಲುವುದು) ಸಮತಾಭಾವದ ಸಾಧನೆಯಿಲ್ಲ; ೧೬) ಜೀವ–ಅಜೀವ ತತ್ತ್ವಗಳನ್ನಾಶ್ರಯಿಸದೆ ಸಮ್ಯಕ್ತ್ವ ಪ್ರಾಪ್ತಿ ಇಲ್ಲ; ೧೭) ಸಮ್ಯಕ್ತ್ವವಿಲ್ಲದೆ ಪಾಪ ಪುಣ್ಯ ಕರ್ಮಗಳನ್ನು ಜಯಿಸಲು ಸಾಧ್ಯವಿಲ್ಲ; ೧೮) ಕರ್ಮಗಳನ್ನು ಜಯಿಸದೆ ಸಂಸಾರದಿಂದ ಬಿಡುಗಡೆ ಮತ್ತು ವೀತರಾಗ ಪದವಿ ಸಾಧ್ಯವಿಲ್ಲ; ೧೯) ವೀತರಾಗ ಇಲ್ಲದೆ ಓಂಕಾರ ರೂಪದ ದಿವ್ಯಧ್ವನಿಯ ಧರ್ಮೋಪದೇಶ ಸಾಧ್ಯವಿಲ್ಲ; ೨೦) ತ್ರಿಕಾಲದಲ್ಲೂ ತ್ರಿಲೋಕದಲ್ಲೂ ಸಮ್ಯಕ್ತ್ವಕ್ಕಿಂತ ದೊಡ್ಡ ಮಿತ್ರನಿಲ್ಲ; ೨೧)ಸುಖ–ದುಃಖಗಳಿಲ್ಲದ ಸಂಸಾರವಿಲ್ಲ; ೨೨)ಕರ್ಮಗಳಿಲ್ಲದಾಗ ಸುಖದುಃಖಗಳು ಆಗುವುದಿಲ್ಲ; ೨೩) ಪಾಪಪುಣ್ಯಗಳಿಲ್ಲದೆ ಕರ್ಮಗಳಿಲ್ಲ; ೨೪)ಧರ್ಮ ಅಧರ್ಮಗಳಿಲ್ಲದೆ ಪುಣ್ಯಪಾಪಗಳಿಲ್ಲ; ೨೫) ಹಿಂಸೆ ಇಲ್ಲ ವಾದಾಗ ಅಧರ್ಮವಾಗುವುದಿಲ್ಲ; ೨೬) ಲೋಭವಿಲ್ಲದೆ ಹಿಂಸೆಯಿಲ್ಲ; ೨೭) ಮೋಹವಿಲ್ಲದೆ ಲೋಭವಿಲ್ಲ; ೨೮) ರಾಗ–ದ್ವೇಷವಿಲ್ಲದ ಮೋಹವಿಲ್ಲ; ೨೯) ಮಿಥ್ಯಾತ್ವವಿಲ್ಲದೆ ರಾಗ ದ್ವೇಷಗಳಿಲ್ಲ; ೩೦) ಆ ತತ್ತ್ವಗಳಲ್ಲಿ ಶ್ರದ್ಧೆಯಿಲ್ಲದೆ ಮಿಥ್ಯಾತ್ವವಿಲ್ಲ; ೩೧) ಮಿಥ್ಯಾತ್ವವಿರುವವರೆಗೂ ಹುಟ್ಟುಸಾವಿನ ತೊಳಲಾಟ ತಪ್ಪುವುದಿಲ್ಲ; ೩೨) ತ್ರಿಲೋಕದಲ್ಲೂ ತ್ರಿಕಾಲದಲ್ಲೂ ಮಿಥ್ಯಾತ್ವ ಕ್ಕಿಂತ ದೊಡ್ಡ ಶತ್ರುವೇ ಇಲ್ಲ.

## ಜೈನತತ್ತ್ವದ ಪ್ರಸ್ತುತತೆ

ಸೃಷ್ಟಿಯಲ್ಲಿ ಲೋಕ, ಅಲೋಕ, ಜೀವ, ಅಜೀವ, ಧರ್ಮ, ಅಧರ್ಮ ಇವೆಲ್ಲವೂ ಇವೆಯೆಂಬ ಜೈನಧರ್ಮವು ಬೋಧಿಸುವ ಕ್ರಮಬದ್ಧ ತಿಳುವಳಿಕೆ, ಸಾಕಷ್ಟು ವೈಚಾರಿಕವೂ, ವೈಜ್ಞಾನಿಕವೂ ಆಗಿದೆ. ಜೈನಧರ್ಮದಲ್ಲಿ ಹೇಳುವ ಕರ್ಮತತ್ತ್ವಗಳು ಸೂಕ್ಷ್ಮವಾಗಿದೆ. ಇಂತಹ ಕರ್ಮಾಣುಗಳು ಆತ್ಮನನ್ನು ಆವರಿಸು ವುದರಿಂದಲೇ ಜೀವವು ಮತ್ತೆ–ಮತ್ತೆ ಸಂಸಾರ ಚಕ್ರದಲ್ಲಿ ಸುತ್ತ ಬೇಕಾಗಿದೆ. ಹೀಗೆ ಜೈನಧರ್ಮವು ಪುದ್ಗಲ ಅಣುವಿಗೂ ಪರಮಾಣುವಿಗೂ ಅಸ್ತಿತ್ವವಿದೆ ಎಂದು ಸಿದ್ಧಪಡಿಸಿದೆ ಹಾಗೂ ಇದನ್ನು ಇಂದಿನ ಎಲೆಕ್ಟ್ರಾನಿಕ್ ತತ್ತ್ವಗಳ ಜೊತೆಗೆ ಅವುಗಳನ್ನು ಹೋಲಿಸಿ ನೋಡಬಹುದಾಗಿದೆ.

ಜೈನ ತತ್ತ್ವಶಾಸ್ತ್ರದ ಅತ್ಯಂತ ಮಹತ್ವದ ಸಿದ್ಧಾಂತ ವೆಂದರೆ **ಅನೇಕಾಂತವಾದ.** ವಿಚಾರಪೂರ್ಣವಾದ ಹಾಗೂ ತೀವ್ರ ಸಂಘರ್ಷಗಳಿಂದ ಕೂಡಿದ ಇಂದಿನ ಜಗತ್ತಿಗೆ ಈ ಸಿದ್ಧಾಂತ ಒಂದೇ ವರದಾನವಾಗಬಲ್ಲದು. ತಾವು ಹೇಳಿದ್ದೇ ಸತ್ಯ ಎಂಬುದು ಸಾಮಾನ್ಯವಾಗಿ ಎಲ್ಲರ ವಾದ. ಆದರೆ ಹಾಗೆ ವಾದಿಸುವುದು ಕೇವಲ ಸತ್ಯವಾಗದೆ, ಅಂಶ ಮಾತ್ರವಾಗಿರುತ್ತದೆ. ಅದು ಸಂಪೂರ್ಣ ಸತ್ಯವಾಗದು. "ನೀನೂ ವಾದಿಸು, ಇತರರನ್ನೂ ವಾದಿಸಲು ಬಿಡು" ಎಂಬ ವಿಚಾರ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಅಮೂಲ್ಯ ಸಿದ್ಧಾಂತ ಇದಾಗಿದೆ. ಪ್ರಜಾಪ್ರಭುತ್ವಕ್ಕೆ ಈ ಸಿದ್ಧಾಂತ ಪೂರಕವಾಗಿದೆ. ಸಮತ್ವ ಮತ್ತು ಶಾಂತಿಗಳೇ ಪ್ರಜಾಪ್ರಭುತ್ವದ ಗುರಿಗಳು. ಇವುಗಳನ್ನು ಸಾಧಿಸುವಲ್ಲಿ **ಅನೇಕಾಂತವಾದವು** ಸಂಪೂರ್ಣ ಸಹಕಾರಿ.